5. ಯಡಹಳ್ಳಿ

6. ಯತ್ನಟ್ಟಿಬಾದರದಿನ್ನಿ

ಮಂಡ್ಯ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳು ಹಾಗೂ ಶೌಚಾಲಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 202(725)

ಸದಸ್ಯರ ಹೆಸರು: ಶ್ರೀ ಚಲುವರಾಯ ಸ್ವಾಮಿ ಎಸ್.(ನಾಗಮಂಗಲ)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕಡೆ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಟ್ಟಡಗಳ ಕೊರತೆ ಇದೆ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ. ನಾಗಮಂಗಲ ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷ ಎಷ್ಟು ಶಾಲಾ ಕಟ್ಟಡಗಳ ನಿರ್ಮಾಣ ಮಾಡಲಾಗುವುದು; (ವಿವರ ಒದಗಿಸುವುದು);

ಇ. ಜಿಲ್ಲೆಯಲ್ಲಿ ಎಷ್ಟು ಶಾಲೆಗಳಿಗೆ ಶೌಚಗೃಹ ಸೌಲಭ್ಯಗಳಿಲ್ಲ; ಈ ವರ್ಷ ಎಷ್ಟು ಶಾಲೆಗಳಲ್ಲಿ ಶೌಚ ಗೃಹಗಳನ್ನು ನಿರ್ಮಿಸಲಾಗುವುದು?

ಉತ್ತರ

ಅ. ಮಂಡ್ಯ ಜಿಲ್ಲೆಯ 614 ಪ್ರಾಥಮಿಕ ಶಾಲೆಗಳಿಗೆ ಮತ್ತು 102 ಪ್ರೌಢ ಶಾಲೆಗಳಿಗೆ ಕೊಠಡಿಗಳ ಕೊರತೆ ಇರುತ್ತದೆ. ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ಪ್ರಾಥಮಿಕ	ಪ್ರೌಢ
ಕೆ.ಆರ್.ಪೇಟೆ	33	23
ಮದ್ದೂರು	70	16
ಮಳವಳ್ಳಿ	176	19
ಮಂಡ್ಯ ಉತ್ತರ	61	07

ಮಂಡ್ಯ ದಕ್ಷಿಣ	17	11
ನಾಗಮಂಗಲ	197	14
ಪಾಂಡವಪುರ	50	07
ಶ್ರೀರಂಗಪಟ್ಟಣ	04	05
ಒಟ್ಟು	614	102

ಆ. ನಾಗಮಂಗಲ ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷದಲ್ಲಿ ತೊಳಲಿ, ಮೂಡಲಮಲ್ಲಹಳ್ಳಿ, ದೊಂದೆ ಮಾದಹಳ್ಳಿಯಲ್ಲಿ ತಲಾ ಒಂದು ಕೊಠಡಿಯಂತೆ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಾಗಮಂಗಲ ಉರ್ದು ಬಾಲಕಿಯರ ಪ್ರಾಥಮಿಕ ಶಾಲೆಗೆ ಎರಡು ಕೊಠಡಿಗಳನ್ನು ಹಾಗೂ ತಟ್ಟಹಳ್ಳಿ ಮತ್ತು ಹರದನಹಳ್ಳಿಯಲ್ಲಿ ತಲಾ ಒಂದು ಕೊಠಡಿಯಂತೆ ಪ್ರೌಢಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು.

ಇ. ಜಿಲ್ಲೆಯಲ್ಲಿ ಒಟ್ಟು 1089 ಪ್ರಾಥಮಿಕ ಶಾಲೆಗಳಿಗೆ 65 ಪ್ರೌಢಶಾಲೆಗಳಿಗೆ ಶೌಚಗೃಹ ಸೌಲಭ್ಯವಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ 14 ಪ್ರಾಥಮಿಕ ಹಾಗೂ 35 ಪ್ರೌಢಶಾಲೆಗಳಿಗೆ ಶೌಚಗೃಹ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಹಣ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 204(358)

ಸದಸ್ಯರ ಹೆಸರು: ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ)

ಉತ್ತರಿಸುವ ಸಚಿವರು: ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಪ್ರಶ್ನೆ

ಅ) 1999-2000 ಹಾಗೂ 2000-01ನೇ ಸಾಲಿನಲ್ಲಿ ವಯಸ್ಕರ ಶಿಕ್ಷಣಕ್ಕೆ ಶಿವಮೊಗ್ಗ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಆ) ಈ ಅನುದಾನದಲ್ಲಿ ಶಿವಮೊಗ್ಗ ವಿಧಾನಸಭೆ ಕ್ಷೇತ್ರದಲ್ಲಿ ಎಷ್ಟು ಜನರಿಗೆ